# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ** 5019/2022 ಫ್ರಾಸಾ-30
ಚಾಸಾ-41

ದಿನಾಂಕಃ 03-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಮಂಜುನಾಥ |
| **ತಂದೆಯ / ಗಂಡನ ಹೆಸರು** | ರಾಮಯ್ಯ |
| **ವಯಸ್ಸು** | 56 |
| **ಉದ್ಯೋಗ** | ಹೆಚ್.ಸಿ ನಂ-404, ಮಧುಗಿರಿ ಪೊಲೀಸ್ ಠಾಣೆ |
| **ವಾಸಸ್ಥಳ** | ಮಧುಗಿರಿ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ನಾನು ಫೆಬ್ರವರಿ 2016 ರಿಂದ ಜೂನ್ 2022 ರವರೆಗೂ ಕೊರಟಗೆರೆ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ. 16.02.2022 ರಂದು ಕೊರಟಗೆರೆ ವೃತ್ತದ ನಿರೀಕ್ಷಕರು ಚಾಸಾ-50 ರವರು ಠಾಣೆಯಲ್ಲಿದ್ದ ನಮ್ಮನ್ನು ಕೊರಟಗೆರೆ ಮಲ್ಲೇಶ್ವರ ರಸ್ತೆಯಲ್ಲಿ ಬರುವ ರುದ್ರ ಭೂಮಿಯಲ್ಲಿ ಸುಮಾರು ಮದ್ಯಾಹ್ನ 3-30 ಗಂಟೆಗೆ ಬರಮಾಡಿಕೊಂಡು ರುದ್ರಭೂಮಿಯಲ್ಲಿ ಮೃತೆ ಸುಮಿತ್ರಾ ರವರ ಹೂತಿರುವ ಜಾಗದಲ್ಲಿ ಕರ್ತವ್ಯಕ್ಕೆ ಚಾಸಾ-42 ರವರ ಜೊತೆ ನನ್ನನ್ನು ಕರ್ತವ್ಯಕ್ಕೆ ನೇಮಿಸಿ ಈ ಜಾಗದಲ್ಲಿ ಮೃತೆ ಸುಮಿತ್ರಾಳನ್ನು ಹೂತಿರುವುದಾಗಿ ಚಾಸಾ-50 ರವರು ತಿಳಿಸಿದ್ದು, ಸದರಿ ಜಾಗದ ಸಂರಕ್ಷಣೆಗೆ ನೇಮಿಸಿದ್ದು, ನೇಮಕದಂತೆ ನಾನು ಮತ್ತು ಚಾಸಾ-42 ರಂದು ದಿ. 16.02.2022 ರಂದು 3-30 ರಿಂದ ದಿ. 19.02.2022 ಬೆಳಿಗ್ಗೆ 10-15 ಗಂಟೆಗೆ ವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ.

**ಚಾಸಾ-41**

**<u>ಪಾಟೀಸವಾಲು ಶ್ರೀ. ಎಂ.ಎಂ. ವಕೀಲರಿಂದ ಆರೋಪಿ ಪರವಾಗಿ:-</u>**

ನಮ್ಮ ಠಾಣಾ ಠಾಣಾ ಡೈರಿಯಲ್ಲಿ ನಮ್ಮ ಕರ್ತವ್ಯದ ಬಗ್ಗೆ ಠಾಣಾಧಿಕಾರಿ ನಮೂದು ಮಾಡುತ್ತಾರೆ. ಆ ದಿನ ನನ್ನನ್ನು ಬೆಂಗಾವಲಿಗೆ ನೇಮಿಸಿರಲಿಲ್ಲ ನಮ್ಮ ಮೇಲಾಧಿಕಾರಿಗಳ ಮಾತುಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತುಮಕೂರು-ಮಧುಗಿರಿ.**